## 4.ಹುಲಿ: ಆರೋಗ್ಯಕರ ಜೀವ ವೈವಿಧ್ಯತೆಯ ಸಾರ

ಹುಲಿ ಸಂರಕ್ಷಣೆಯು ಆತ್ಮನಿರ್ಭರತೆಗೆ ಒಂದು ಉತ್ತಮ ಉದಾಹರಣೆ. ಪ್ರಕೃತಿ ಪ್ರಿಯ ರಾಷ್ಟ್ರವಾದ ಭಾರತವು ವಿಶ್ವದ ಅತಿ ಹೆಚ್ಚು ಹುಲಿಗಳ ಆವಾಸಸ್ಥಾನವಾಗಿದೆ. ಇಂದು ದೇಶವು ವಿಶ್ವದ ಹುಲಿಗಳ ಸಂಖ್ಯೆಯಲ್ಲಿ ಶೇ.70 ರಷ್ಟನ್ನು ಹೊಂದಿದೆ. ಒಟ್ಟು 2,967 ಹುಲಿಗಳು ಭಾರತದಲ್ಲಿವೆ. ಇದು ಜನರ ಮತ್ತು ದೇಶದ ಬಹುದೊಡ್ಡ ಸಂರಕ್ಷಣಾ ಯಶಸ್ಸು.

**ವಿಶ್ವ ಜೀವ ವೈವಿಧ್ಯತೆಯ 8%:** ನಾವು ವಿಶ್ವದ ಭೂ ಪ್ರದೇಶದಲ್ಲಿ ಕೇವಲ ಶೇ.2.5 ರಷ್ಟನ್ನು ಮಾತ್ರ ಹೊಂದಿದ್ದೇವೆ. ಕೇವಲ ನಾಲ್ಕು ಪ್ರತಿಶತದಷ್ಟು ಶುದ್ಧ ಮಳೆ ನೀರಿನ ಸಂಪನ್ಮೂಲಗಳನ್ನು ಮಾತ್ರ ಹೊಂದಿರುವ ನಮಗೆ ಇದೊಂದು ಪ್ರಮುಖ ಅಡಚಣೆ ಎಂದೇ ಪರಿಗಣಿಸಬಹುದು. ವಿಶ್ವದ ಶೇ.16ರಷ್ಟು ಮಾನವ ಮತ್ತು ಜಾನುವಾರು ಜನಸಂಖ್ಯೆ ನಮ್ಮ ದೇಶದಲ್ಲಿದೆ. ಇವರೆಡಕ್ಕೂ ಆಹಾರ, ನೀರು ಮತ್ತು ಭೂಮಿ ಬೇಕು. ಆದರೂ ಭಾರತವು ವಿಶ್ವದ ಜೀವವೈವಿಧ್ಯತೆಯ 8 ಪ್ರತಿಶತವನ್ನು ಹೊಂದಿದೆ. ಪ್ರಕೃತಿಯನ್ನು ಬದುಕಿನ ಭಾಗವಾಗಿ ಕಾಣುವ ಭಾರತದ ನೀತಿಗಳು ಇದಕ್ಕೆ ಕಾರಣ.

**ಹುಲಿ ಗಣತಿಯಲ್ಲಿ ಗಿನ್ನೆಸ್ ದಾಖಲೆ:** ಭಾರತದ ಇತ್ತೀಚಿನ ಹುಲಿಗಣತಿಯಲ್ಲಿ 25 ಸಾವಿರ ಕ್ಯಾಮರಾ ಟ್ರ್ಯಾಪ್‌ಗಳನ್ನು ಬಳಸಿ, 35 ದಶಲಕ್ಷಕ್ಕೂ ಹೆಚ್ಚು ಚಿತ್ರಗಳನ್ನು ತೆಗೆದಿರುವುದು ಗಿನ್ನೆಸ್ ದಾಖಲೆಯಾಗಿದೆ. ಇದು ಜಗತ್ತಿನಾದ್ಯಂತ ದೇಶವೊಂದು ಕೈಗೊಂಡ ಅತಿದೊಡ್ಡ ಗಣತಿಯಾಗಿದೆ.

**ದೇಶದಲ್ಲಿವೆ 50 ಹುಲಿ ಧಾಮಗಳು:** 1973ರಲ್ಲಿ ಒಂಭತ್ತು ಹುಲಿ ಧಾಮಗಳೊಂದಿಗೆ ಹುಲಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಇಂದು ಭಾರತವು 72,000 ಚದರ ಕಿ.ಮೀ.ಗಳ 50 ಹುಲಿ ಧಾಮಗಳನ್ನು ಹೊಂದಿದೆ. ಈ ಪೈಕಿ 21 ಅತ್ಯುತ್ತಮವಾಗಿ ಕೆಲಸ ಮಾಡುತ್ತಿವೆ. 17 ಉತ್ತಮ ಮತ್ತು 12 ತೃಪ್ತಿಕರವಾಗಿವೆ ಎಂದು ಹೇಳಲಾಗಿದೆ. ಕಳಪೆ ವರ್ಗದಲ್ಲಿ ಯಾವುದೂ ಇಲ್ಲ ಎಂಬುದು ಇಲ್ಲಿ ಗಮನಾರ್ಹ, ವ್ಯವಸ್ಥಿತ ಮತ್ತು ವೈಜ್ಞಾನಿಕ ಹುಲಿ ಸಂರಕ್ಷಣಾ ವಿಧಾನಗಳು ಯಶಸ್ಸಿಗೆ ಬಹಳಷ್ಟು ಕೊಡುಗೆ ನೀಡಿವೆ. ಇದಕ್ಕೆ ಮತ್ತೊಂದು ಪ್ರಮುಖ ಕಾರಣವೆಂದರೆ ಹೆಚ್ಚಿದ ಕಣ್ಗಾವಲು ಬಹುತೇಕ ಎಲ್ಲಾ ಸಂಘಟಿತ ಬೇಟೆಯ ನಿರ್ಮೂಲನೆ ಮಾಡಲಾಗಿದೆ.

**ಹುಲಿ ಸಂತತಿ ಏರಿಕೆ ಕಾರಣ ಏನು:** ಅನುಕೂಲಕರ ವಾತಾವರಣದಲ್ಲಿ ಹುಲಿಗಳು ವೇಗವಾಗಿ ಸಂತಾನೋತ್ಪತ್ತಿ ಮಾಡುತ್ತವೆ. ದೇಶದ ಅನೇಕ ಭಾಗಗಳಲ್ಲಿ ಮುಖ್ಯ ಪ್ರದೇಶಗಳ ಅಂಚಿನ ಹಳ್ಳಿಗಳ ಸ್ಥಳಾವಕಾಶ ಲಭ್ಯವಾಗಲು ಕಾರಣವಾಗಿದೆ. ದೇಶದಲ್ಲಿರುವ ಹುಲಿಗಳ ಸಂಖ್ಯೆಯ ಆಧಾರದಲ್ಲಿ ಆಹಾರ ಸರಪಳಿಯಲ್ಲಿ ಹುಲಿಗಳು ತುತ್ತ ತುದಿಯಲ್ಲಿರುತ್ತವೆ. ಅವುಗಳ ಸಂರಕ್ಷಣೆ ದೃಢವಾದ ಜೀವವೈವಿಧ್ಯತೆಗೆ ಸಾಕ್ಷಿಯಾಗಿದೆ. ಹುಲಿಗಳ ಸಂಖ್ಯೆಯ ಹೆಚ್ಚಳವು ಅವುಗಳ ಬೇಟೆಯ ಪ್ರದೇಶಗಳು ಮತ್ತು ಅವಾಸಸ್ಥಾನಗಳು ಉತ್ತಮ ಸ್ಥಿತಿಯಲ್ಲಿವೆ ಎಂಬುದನ್ನು ತೋರಿಸುತ್ತದೆ. ನಾವು ಹುಲಿ ಸಂಖ್ಯೆಯಲ್ಲಿ ನಾಯಕನ ಸ್ಥಾನದಲ್ಲಿರುವುದರಿಂದ ಜಾಗತಿಕ ಹುಲಿ ವೇದಿಕೆಯ ಮೂಲಕ ನಮ್ಮ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುತ್ತೇವೆ. ಭಾರತವು ಥೈಲ್ಯಾಂಡ್, ಮಲೇಷ್ಯಾ, ಬಾಂಗ್ಲಾ ದೇಶ, ಭೂತಾನ್ ಮತ್ತು ಕಾಂಬೋಡಿಯಾದ ಕ್ಷೇತ್ರ ಅಧಿಕಾರಿಗಳಿಗೆ ಸಾಮರ್ಥ್ಯ ವೃದ್ಧಿ ಕಾರ್ಯಾಗಾರಗಳನ್ನು ನಡೆಸಿದೆ. ಅನೇಕ ದೇಶಗಳು ನಮ್ಮ ದೇಶದ ವಿವಿಧ ಹುಲಿ ಧಾಮಗಳಿಗೆ ಭೇಟಿ ನೀಡಿವೆ.

ಎಲ್ಲಾ 13 ಹುಲಿ ಸಂತತಿ ದೇಶಗಳೊಂದಿಗೆ ನಾವು ಹಲವಾರು ತಿಳುವಳಿಕೆ ಒಪ್ಪಂದಗಳು ಮತ್ತು ಸಹಕಾರ ಒಪ್ಪಂದಗಳನ್ನು ಹೊಂದಿದ್ದೇವೆ. ಹುಲಿಗಳ ಸ್ಮಾರ್ಟ್ ಗಸ್ತು, ಶಿಷ್ಟಾಚಾರ, ಹುಲಿಗಳ ತೀವ್ರ ರಕ್ಷಣೆ ಮತ್ತು ಪರಿಸರ ಸ್ಥಿತಿಗತಿಯ ನಿರ್ವಹಣಾ ವ್ಯವಸ್ಥೆಗಾಗಿ ಮಹತ್ವಾಕಾಂಕ್ಷೆಯ ಡಿಜಿಟಲ್ ಇಂಡಿಯಾ ಕಾರ್ಯಕ್ರಮವನ್ನು ಸರ್ಕಾರ ಪ್ರಾರಂಭಿಸಿದೆ.

**ಜೀವ ವೈವಿಧ್ಯತೆಗೆ ಹುಲಿಗಳೇ ಸಾಕ್ಷಿ:** ಹೆಚ್ಚಿನ ಸಂಖ್ಯೆಯ ಹುಲಿಗಳು ನಿಜಕ್ಕೂ ಶ್ರೀಮಂತ ಜೀವ ವೈವಿಧ್ಯತೆ ಮತ್ತು ವೈಜ್ಞಾನಿಕ ಸಂರಕ್ಷಣೆಯನ್ನು ಪ್ರಮಾಣೀಕರಿಸುತ್ತವೆ. ಹವಾಮಾನ ಬದಲಾವಣೆಯಂತಹ ಸವಾಲುಗಳನ್ನು ನಾವು ಎದುರಿಸುತ್ತಿರುವ, ನಮ್ಮ ಕೆಲಸಗಳಿಗೆ ಆಧಾರವಾಗಿ ಈ ಶ್ರೀಮಂತ ಜೀವವೈವಿಧ್ಯತೆಯನ್ನು ಹೊಂದಿರಬೇಕು. 10 ವರ್ಷಗಳಲ್ಲಿ 2.5 ಬಿ.ಟನ್ ಇಂಗಾಲ ಕಡಿಮೆ ಮಾಡಲು ನಿರ್ಧರಿಸಿದ್ದೇವೆ. ಕಾಡು ಮತ್ತು ಕಾಡಿನ ಹೊರಗೆ ಮರಗಳ ಹೊದಿಕೆ ಹೆಚ್ಚುತ್ತಿರುವ ಕೆಲವೇ ದೇಶಗಳಲ್ಲಿ ಭಾರತವೂ ಸೇರಿದೆ.

**ಲೇಖಕರು: ಪ್ರಕಾಶ್ ಜಾವ್ಡೇಕರ್,**

**ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ,**
**ಆಧಾರ:ಕನ್ನಡ ಪ್ರಭ, ದಿನಾಂಕ: 29.07.2020**